**ದಿನಾಂಕಃ 23.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ 2, 7 ರಿಂದ 9 ನೇ ಪ್ರತಿವಾದಿ ಪರ ಶ್ರೀ. ಸಿ.ಸಿ.ಬಿ. ವಕೀಲರಿಂದಃ**

ನನಗೆ ಓದಲು ಬರುತ್ತದೆ. ಆದರೆ ಬರೆಯಲು ಬರುವುದಿಲ್ಲ. ನನ್ನ ತಂದೆ ಬಂಗಾರಪ್ಪ 1988 ರಲ್ಲಿ ತೀರಿಕೊಂಡಿರುತ್ತಾರೆ ಅಂದರೆ ಸರಿ. 2 ನೇ ಪ್ರತಿವಾದಿ ಹುಚ್ಚಪ್ಪ ರವರ ಮದುವೆಯು 1971 ರಲ್ಲಿ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಅದಾದ ಎರಡು ವರ್ಷಗಳ ನಂತರ 3 ಮತ್ತು 4 ನೇ ಪ್ರತಿವಾದಿಯವರ ಮದುವೆ ಆಗಿರುತ್ತದೆ ಅಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ಅವರು ಮದುವೆ ಆಗಿ ಈಗ ಸುಮಾರು 30 ವರ್ಷ ಆಯಿತು ಎಂದು ಉತ್ತರಿಸುತ್ತಾರೆ. ಈ ರೀತಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 7 ನೇ ಪ್ರತಿವಾದಿಯವರ ತವರು ಮನೆ ಶಿಗ್ಗಾ ಗ್ರಾಮ ಅಂದರೆ ಸರಿ. ನಾನು

ಟೇಲರಿಂಗ್ ಕೆಲಸದ ಜೊತೆ ಗದ್ದೆ ಕೆಲಸ ಮಾಡುತ್ತೇನೆ. ನಾನು ಟೇಲರಿಂಗ್ ಕೆಲಸ ಕಲಿತ ನಂತರ ಬೆಂಗಳೂರಿಗೆ ಕೆಲಸಕ್ಕೆ ಹೋಗಿರುತ್ತೇನೆ ಅಂದರೆ ಸರಿಯಲ್ಲ. ನಂತರ ಶಿವಮೊಗ್ಗದಲ್ಲಿ ಬಂದು ಟೇಲರಿಂಗ್ ಕೆಲಸ ಮಾಡುತ್ತಿದ್ದೆ ಅಂದರೆ ಸುಳ್ಳು. ಆ ನಂತರದಲ್ಲಿ ಸೊರಬದಲ್ಲಿ ಬಂದು ಟೇಲರಿಂಗ್ ಕೆಲಸ ಮಾಡುತ್ತಿದ್ದೆ ಅಂದರೆ ಸಾಕ್ಷಿಯು ಬಂದು ಹೋಗಿ ಮಾಡುತ್ತಿದ್ದೆ ಎಂದು ಉತ್ತರಿಸುತ್ತಾರೆ. ಸೊರಬದ ಕೃಷ್ಣಪ್ಪ ಬಡಿಗೇರ ರವರ ಮನೆಯಲ್ಲಿ ಟೇಲರಿಂಗ್ ಅಂಗಡಿ ನಡೆಸುತ್ತಿದ್ದೆ ಅಂದರೆ ಸುಳ್ಳು. 2 ನೇ ಪ್ರತಿವಾದಿಯ ಮದುವೆ ಆದ ನಂತರ ಅವರ ಹೆಂಡತಿಗೂ ಹಾಗೂ ನಮ್ಮ ಕುಟುಂಬಕ್ಕೂ ಸರಿ ಬರಲಿಲ್ಲ ಅಂದರೆ ಸಾಕ್ಷಿಯು ನಾನು ಜದಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಆ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೀರಾ ಅಂದರೆ ಸಾಕ್ಷಿಯು ಒಟ್ಟಿಗೆ ಇದ್ದೆವು ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ 1 ನೇ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**